# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೦, ಏಪ್ರಿಲ್, ೨೦೨೬ (ಚೈತ್ರ, ೨೦, ಶಕವರ್ಷ, ೧೯೪೮)<br>BENGALURU, FRIDAY, 10, APRIL, 2026 (CHAITHRA, 20, SHAKAVARSHA, 1948) | ನಂ. ೨೭೫<br>No. 275 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ
## ಸಂಖ್ಯೆ: ಸಂವ್ಯಶಾಇ 12 ಶಾಸನ 2026, ಬೆಂಗಳೂರು, ದಿನಾಂಕ:10.04.2026

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2026 ಇದಕ್ಕೆ 2026ರ ಏಪ್ರಿಲ್ ತಿಂಗಳ 9ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026ರ ಕರ್ನಾಟಕ ಅಧಿನಿಯಮ ಸಂಖ್ಯೆ:27 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ (ಭಾಗ-IVಎ)ರಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## 2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 27

(2026ರ ಏಪ್ರಿಲ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2026

(2026ರ ಏಪ್ರಿಲ್ 9ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ,-

(i) ಖಂಡ(ಸಿಎ)ಯನ್ನು (ಸಿಬಿ) ಎಂದು ಮರುಸಂಖ್ಯೆ ನೀಡತಕ್ಕದ್ದು;

(ii) ಹಾಗೆ ಮರುಸಂಖ್ಯೆ ನೀಡಲಾದ ಖಂಡ(ಸಿಬಿ)ಯ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ: -

"(ಸಿಎ) "ನಿರ್ಣಾಯಕ ಹುದ್ದೆಗಳು" ಎಂದರೆ ಮತ್ತು ಪದವಿ-ಪೂರ್ವ ಕಾಲೇಜಿನ ಉಪನ್ಯಾಸಕರನ್ನೊಳಗೊಂಡಂತೆ ಈ ಮುಂದಿನ ಪ್ರವರ್ಗಗಳ ಎಲ್ಲಾ ಬೋಧಕ ಹುದ್ದೆಗಳನ್ನು ಒಳಗೊಳ್ಳುವುದು, ಎಂದರೆ:-

**(i) ಪ್ರವರ್ಗ 1:** ಮುಖ್ಯೋಪಾಧ್ಯಾಯರು ಅಥವಾ ಉಪ-ಪ್ರಾಂಶುಪಾಲರನ್ನು ಹೊರತುಪಡಿಸಿ ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯ, ಪಿಎಂ ಶ್ರೀ ಶಾಲೆಗಳು;

**(ii) ಪ್ರವರ್ಗ 2:** ಮುಖ್ಯೋಪಾಧ್ಯಾಯರು ಅಥವಾ ಉಪ-ಪ್ರಾಂಶುಪಾಲರನ್ನು ಹೊರತುಪಡಿಸಿ, 250 ವಿದ್ಯಾರ್ಥಿಗಳನ್ನು ಮೀರಿದ ಅಥವಾ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಲಾದ ದಾಖಲಾತಿ ಮಿತಿಯ ಪ್ರಕಾರ ದಾಖಲಾತಿಯನ್ನು ಹೊಂದಿರುವ ಎಲ್ಲಾ ಇತರ ಶಾಲೆಗಳು ಹಾಗೂ ಸರ್ಕಾರಿ ಪದವಿ-ಪೂರ್ವ ಕಾಲೇಜುಗಳು ; ಮತ್ತು

**(iii) ಪ್ರವರ್ಗ 3:** ಪ್ರವರ್ಗ 1 ಮತ್ತು 2ರಲ್ಲಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಉಪ-ಪ್ರಾಂಶುಪಾಲರು ಅಥವಾ ಸರ್ಕಾರಿ ಪದವಿ-ಪೂರ್ವ ಕಾಲೇಜುಗಳ ಪ್ರಾಂಶುಪಾಲರು."

(iii) (ಡಿ)ಖಂಡದ ಕೊನೆಯಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ :-

"ಪರಂತು, ಅನುಸೂಚಿ-I ರ IIIನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಹುದ್ದೆಗಳ ವರ್ಗಾವಣೆಯನ್ನು ಕೌನ್ಸಿಲಿಂಗ್‌ನ ಮೂಲಕ ಮಾತ್ರ ನಡೆಸತಕ್ಕದ್ದು, ಅದಕ್ಕಾಗಿ ಶಾಲೆಗಳು/ಕಾಲೇಜುಗಳಲ್ಲಿನ ಸ್ಥಾನಿಕ(incumbent) ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಕನಿಷ್ಠ ಸೇವಾವಧಿಯು ಹನ್ನೆರಡು ನಿರಂತರ ವರ್ಷಗಳಾಗಿರತಕ್ಕದ್ದು:"

ಮತ್ತು ಪರಂತು ಅನುಸೂಚಿ-I ರ IIIನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಹುದ್ದೆಗಳಲ್ಲಿನ ಗರಿಷ್ಠ ಸೇವಾವಧಿಯು ಮೂರು ವರ್ಷಗಳು ಮಾತ್ರ ಆಗಿರತಕ್ಕದ್ದು:

ಅಲ್ಲದೆ ಪರಂತು ಅನುಸೂಚಿ-Iರಲ್ಲಿ ಮತ್ತು 2ನೇ ಪ್ರಕರಣದ (ಎಚ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ಬೋಧಕ ಹುದ್ದೆಗಳ ಸ್ಥಾನಿಕರನ್ನು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿನ ಬೋಧಕೇತರ ಹುದ್ದೆಗಳಿಗೆ ಮತ್ತು ರಾಜ್ಯ ಸಿವಿಲ್ ಸೇವೆಗಳು ಅಥವಾ ಮಂಡಳಿಗಳು ಅಥವಾ ನಿಗಮಗಳಲ್ಲಿನ ಯಾವುದೇ ಇತರ ಹುದ್ದೆಗಳಿಗೆ ವರ್ಗಾವಣೆ ಮಾಡತಕ್ಕದ್ದಲ್ಲ."

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ, 4ನೇ ಪ್ರಕರಣದ, (2)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(3) ಈ ಪ್ರಕ್ರಿಯೆಯಡಿಯಲ್ಲಿನ ಎಲ್ಲಾ ವರ್ಗಾವಣೆಗಳು, 2ನೇ ಪ್ರಕರಣದ (ಸಿಎ) ಖಂಡದಡಿ ಪ್ರವರ್ಗೀಕರಿಸಲಾದ ನಿರ್ಣಾಯಕ ಹುದ್ದೆಗಳಿಗೆ ಮತ್ತು ಯಾವುದೇ ನಿರ್ಣಾಯಕ ಹುದ್ದೆಗಳು ಲಭ್ಯವಿಲ್ಲದಿದ್ದರೆ, ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ವರ್ಗಾವಣೆಗೊಳ್ಳತಕ್ಕದ್ದು."

**4. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ, 5ನೇ ಪ್ರಕರಣದ, (iii)ನೇ ಖಂಡದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(iii) ಈ ಪ್ರಕ್ರಿಯೆಯಡಿಯಲ್ಲಿನ ಎಲ್ಲಾ ವರ್ಗಾವಣೆಗಳು, 2ನೇ ಪ್ರಕರಣದ (ಸಿಎ) ಖಂಡದಡಿ ಪ್ರವರ್ಗೀಕರಿಸಲಾದ ನಿರ್ಣಾಯಕ ಹುದ್ದೆಗಳಿಗೆ ಮತ್ತು ಯಾವುದೇ ನಿರ್ಣಾಯಕ ಹುದ್ದೆಗಳು ಲಭ್ಯವಿಲ್ಲದಿದ್ದರೆ, ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ವರ್ಗಾವಣೆಗೊಳ್ಳತಕ್ಕದ್ದು."

**5. ಪ್ರಕರಣ 6ರ ಪ್ರತಿಯೋಜನೆ.-** ಮೂಲ ಅಧಿನಿಯಮದ, 6ನೇ ಪ್ರಕರಣದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"**6. ಕೋರಿಕೆ ವರ್ಗಾವಣೆ.-** ಒಂದು ಶಾಲೆಯಲ್ಲಿ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವಾವಧಿಯನ್ನು ಸಲ್ಲಿಸಿರುವ ಶಿಕ್ಷಕ ಅಥವಾ ಉಪನ್ಯಾಸಕನಿಗೆ, ವರ್ಗಾವಣೆಗಾಗಿ ಲಭ್ಯವಿರುವ ನಿರ್ಣಾಯಕ ಹುದ್ದೆ ಮತ್ತು ನಿಯಮಿಸಬಹುದಾದಂಥ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರಲು ಆಯ್ಕೆಯನ್ನು ನೀಡತಕ್ಕದ್ದು:

ಪರಂತು, ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕ ಅಥವಾ ಉಪನ್ಯಾಸಕರು, ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗೆ, ವರ್ಗಾವಣೆ ಕೋರಿಕೆಗಾಗಿ ಇತರ ಎಲ್ಲಾ ಅರ್ಹತಾ ಷರತ್ತುಗಳ ಜೊತೆಗೆ, ಆ ಪ್ರದೇಶದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನೂ ಸಹ ಪೂರ್ಣಗೊಳಿಸಿರತಕ್ಕದ್ದು."

**6. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ, 10ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರಲ್ಲಿ,-

(ಎ) ಖಂಡ (ii)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ii-ಎ) ಗರ್ಭಿಣಿ ಶಿಕ್ಷಕಿ ಅಥವಾ ಐದು ವರ್ಷಗಳಿಗಿಂತ ಕಡಿಮೆಯಲ್ಲದ ವಯಸ್ಸಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ:

ಪರಂತು ಸದರಿ ಉಪಬಂಧವು ಪ್ರಸೂತಿ ರಜೆಯಿಂದ ಹಿಂದಿರುಗಿದ ನಂತರ ಶಿಕ್ಷಕರು ಕರ್ತವ್ಯಕ್ಕೆ ಮರಳುವ ವರ್ಷದಲ್ಲಿ ಕೈಗೊಳ್ಳುವ ಶಿಕ್ಷಕರ ಸಾಮಾನ್ಯ ವರ್ಗಾವಣೆಗೆ ಮಾತ್ರ ಅನ್ವಯವಾಗತಕ್ಕದ್ದು."

(ಬಿ) ಖಂಡ (vii)ನ್ನು ಬಿಟ್ಟುಬಿಡತಕ್ಕದ್ದು.

(ii) ಉಪ-ಪ್ರಕರಣ (4)ರಲ್ಲಿನ "ಮತ್ತು (vii)ನೇ" ಎಂಬ ಪದ, ಆವರಣಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

**7. ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ, ಅನುಸೂಚಿ-Iರಲ್ಲಿನ, ಕ್ರಮಸಂಖ್ಯೆ-II ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

| | |
|---|---|
| III | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET)/ ಶಿಕ್ಷಕರ ತರಬೇತಿ ಸಂಸ್ಥೆಗಳು (TTI) / ಶಿಕ್ಷಕರ ಕಲಿಕಾ ಕಾಲೇಜುಗಳಲ್ಲಿನ (CTE) / ರಾಜ್ಯ, ವಿಭಾಗೀಯ ಮತ್ತು ಜಿಲ್ಲಾ ಮಟ್ಟದ ಆಡಳಿತ ಕಛೇರಿಗಳು ಎಂದರೆ, ಶಾಲಾ ಶಿಕ್ಷಣ ಆಯುಕ್ತರ ಕಛೇರಿ/ ಹೆಚ್ಚುವರಿ ಶಾಲಾ ಶಿಕ್ಷಣ ಆಯುಕ್ತರ ಕಛೇರಿ/ ಡಿಎಸ್ಇಆರ್‌ಟಿ/ ಕೆಎಸ್ಇಎಬಿ/ಎಸ್ಎಸ್‌ಕೆ/ಕೆಟಿಬಿಎಸ್/ಡಿಡಿಪಿಐ-ಗಳಲ್ಲಿನ ಬೋಧಕ ಹುದ್ದೆಗಳು |

| | |
|---|---|
| 1 | ಉಪನ್ಯಾಸಕ |
| 2 | ಉಪನ್ಯಾಸಕ (ಕರಕುಶಲ) |
| 3 | ಉಪನ್ಯಾಸಕ (ದೈಹಿಕ ಶಿಕ್ಷಣ) |
| 4 | ಕಿರಿಯ ಪ್ರೋಗ್ರಾಮ್ ಅಧಿಕಾರಿ (Junior Program Officer) |
| 5 | ಸಹಾಯಕ ನಿರ್ದೇಶಕ (ಬೋಧನೆ) |
| 6 | ಉಪನ್ಯಾಸಕ (ಕಾರ್ಯಾನುಭವ) |
| 7 | ವಿಶೇಷ ತನಿಖಾಧಿಕಾರಿ (ವೃತ್ತಿ ಶಿಕ್ಷಣ) |
| 8 | ಉಪನ್ಯಾಸಕ (ಚಿತ್ರಕಲೆ) |

"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

**PARLIAMENTARY AFFAIRS AND LEGISLATION SECRETARIAT**
**NOTIFICATION**
**NO. DPAL 12 SHASANA 2026, BENGALURU, DATED:10.04.2026**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2026 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ:27)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IVಎ) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.-

# KARNATAKA ACT NO. 27 OF 2026

(First Published in the Karnataka Gazette Extra-ordinary on the 10th day of April, 2026)

## THE KARNATAKA STATE CIVIL SERVICES (REGULATION OF TRANSFER OF TEACHERS) (AMENDMENT) ACT, 2026

(Received the assent of the Governor on the 9th day of April, 2026)

An Act further to amend the Karnataka State Civil Services (Regulation of Transfer of Teachers) Act, 2020.

Whereas it is expedient further to amend the Karnataka State Civil Services (Regulation of Transfer of Teachers) Act, 2020 (Karnataka Act 04 of 2020) for the purposes hereinafter appearing;

Be it enacted by the Karnataka State Legislature in the Seventy seventh year of the Republic of India, as follows:-

**1. Short title and commencement.-** (1) This Act may be called the Karnataka State Civil Services (Regulation of Transfer of Teachers) (Amendment) Act, 2026.

(2) It shall come into force at once.

**2. Amendment of section 2.-** In the Karnataka State Civil Services (Regulation of Transfer of Teachers) Act, 2020 (Karnataka Act 04 of 2020) (hereinafter referred to as the Principal Act) , in section 2 ,-

(i) clause (ca), shall be renumbered as (cb);

(ii) before clause (cb), as so renumbered the following shall be inserted, namely:-

"(ca) **"Critical Posts"** means and include all the teaching posts including Lecturers in Government Pre-University Colleges, in the following categories, namely:-

**(i)** **Category 1:** Karnataka Public Schools, Adarsha Vidyalaya, PM SHRI schools other than Head Master or Vice-Principal;

**(ii)** **Category 2:** All other schools and Government Pre-University Colleges having an enrolment exceeding 250 students or as per enrolment threshold notified by the Government from time to time other than Head Master or Vice-Principal; and

**(iii)** **Category 3:** Head Master or Vice-Principal of High School or Principal in Government Pre-University Colleges under Categories 1 and 2."

(iii) in clause (d), the following proviso shall be inserted at the end, namely:-

"Provided that in case of transfers to the posts specified in serial number III of Schedule-I shall only be by counselling for which the minimum period of service rendered in the incumbent's present cadre in schools / colleges shall be twelve continuous years.

Provided further that, the maximum period of service in the posts specified in serial number III of Schedule-I shall only be three years.

Provided also that, the incumbents of teaching posts specified in Schedule-I and clause (h) of section 2, shall not be transferred to the non-teaching posts in the School Education and Literacy Department and in any other posts in the State Civil Services or Boards or Corporations."

**3. Amendment of section 4.-** In the Principal Act, in section 4, after sub-section (2), the following shall be inserted, namely:-

"(3) All transfers under this process shall be to the Critical posts categorised under clause (ca) of section 2 and if no critical posts available then to other posts which may be notified by the Government."

**4. Amendment of section 5.-** In the Principal Act, in section 5, for clause (iii), the following shall be substituted, namely:-

"(iii) All transfers under this process shall be to the Critical posts categorised under clause (ca) of section 2 and if no critical posts available then to other posts which may be notified by the Government."

**5. Substitution of section 6.-** In the Principal Act, for section 6, the following shall be substituted, namely:-

"**6. Request transfer.-** A teacher or Lecturer who has served minimum period of service in a school or Pre-University College shall be offered an option to seek transfer subject to availability of critical post for transfer and such other conditions as may be prescribed:

Provided that, a teacher or Lecturer working in any of the districts of Kalyana Karnataka region, in addition to all other eligibility conditions shall

also have completed a minimum of ten years of service in the region, for seeking transfer outside of Kalyana Karnataka region."

**6. Amendment of section 10.-** In the Principal Act, in section 10,-

(i) in sub-section (1),-

(a) after clause (ii), the following shall be inserted, namely:-

" (ii-a) pregnant teacher or a female teacher with a child of less than five years:

Provided that, the said provision shall apply only to the general transfer of teachers undertaken in the year in which the teacher resumes to duty upon return from maternity leave."

(b) clause (vii), shall be omitted.

(ii) in sub-section (4), the word, brackets and figures "and (vii)" shall be omitted.

**7. Amendment of Schedule.-** In the Principal Act, in Schedule-I, after serial number II and the entries relating thereto, the following shall be inserted, namely:-

"

| | |
|---|---|
| III | The Teaching posts in District Institute of Education and Training (DIET) / Teacher Training Institutes (TTI) / College of Teacher Education (CTE) / State, Division and District level Administrative Offices viz., Office of the Commissioner of School Education/ Additional Commissioner of School Education / DSERT / KSEAB / SSK / KTBS / DDPI |
| 1 | Lecturer |
| 2 | Lecturer (Craft) |
| 3 | Lecturer (Physical Education) |
| 4 | Junior Program Officer |
| 5 | Assistant Director (Teaching) |
| 6 | Lecturer (Work Experience) |
| 7 | Special Inspector (Vocational Education) |
| 8 | Lecturer (Drawing) |

"

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



The above translation of ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2026 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ:27) be Published in official Gazette under clause (3) of Article 348 of the Constitution of India.

THAAWARCHAND GEHLOT
GOVERNOR OF KARNATAKA

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH